159ನೇ6

(90)

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ -72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

### ವಿಷಯ:

ಶಿವಮೊಗ್ಗದಲ್ಲಿ ನಾಗರಿಕ ಸೌಲಭ್ಯಗಳ ಹದಗೆಟ್ಟ ಸ್ಥಿತಿ: ಜನಪ್ರತಿನಿಧಿಗಳ ಸೂಚನೆಗೂ ಅಧಿಕಾರಿಗಳ ಸ್ಪಂದನೆ ಇಲ್ಲವೇ? ಎಂದು ದಿನಾಂಕ:20-08-2026ರ ಮಲೆನಾಡು ಸುದ್ದಿ ಭಾರತಿ ದಿನ ಪತ್ರಿಕೆಯಲ್ಲಿ ನಗರದ ಅಭಿವೃದ್ಧಿಗೆ ರೂ.165 ಕೋಟಿ ಅನುದಾನ: 100 ದಿನ ಕಳೆದರೂ ಕಾಮಗಾರಿ ಆರಂಭವಾಗಿಲ್ಲ ಎಂದು ಸುದ್ದಿ ಪ್ರಕಟಗೊಂಡಿದ್ದು ನಗರದ ಮೂಲಭೂತ ನಾಗರಿಕ ಸೌಲಭ್ಯಗಳ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಸಾರ್ವಜನಿಕರಲ್ಲಿ ಅಸಮಾಧಾನಗೊಂಡಿರುವುದರಿಂದ ಈ ಕೂಡಲೇ ಸರ್ಕಾರದಿಂದ ಶಿವಮೊಗ್ಗ ನಗರದ ಸಾರ್ವಜನಿಕರ ಮೂಲಭೂತ ಸೌಲಭ್ಯಗಳ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವ ಸೂಚನೆಗೆ ಹೇಳಿಕೆ.

### ಉತ್ತರ:

2024-2025ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 270ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಗರ ಪಾಲಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು, "ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ-ಹಂತ 02" ಅನ್ನು ಘೋಷಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 140 ಎಸ್.ಎಫ್.ಸಿ. 2024(1), ದಿನಾಂಕ:10-07-2024 ರಲ್ಲಿ ರಾಜ್ಯದಲ್ಲಿನ 10 ಮಹಾನಗರ ಪಾಲಿಕೆಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ವಿಜಯಪುರ ಮತ್ತು ತುಮಕೂರುಗಳಲ್ಲಿ ಅಂದಾಜು ಮೊತ್ತ ರೂ.2000.00 ಕೋಟಿಗಳಲ್ಲಿ "ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ-2) ಯನ್ನು (ಎಂ.ಜಿ.ಎನ್.ವಿ.ವೈ)" 2024-25ನೇ ಸಾಲಿನಿಂದ 2026-27 ನೇ ಸಾಲಿನವರೆಗೆ ಮೂರು ವರ್ಷಗಳ ಅವಧಿಯಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆದು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 140 ಎಸ್‌ಎಫ್‌ಸಿ 2024, ದಿನಾಂಕ:25-11-2024ರಲ್ಲಿ ಶಿವಮೊಗ್ಗ ಮಹಾನಗರ ಪಾಲಿಕೆಗೆ ನಗರ ಮೂಲಸೌಕರ್ಯಗಳನ್ನು ಸುಧಾರಿಸುವ ಉದ್ದೇಶದಿಂದ ಮೊತ್ತ ರೂ.127.50 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಸದರಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳ ಸಂಖ್ಯೆ: ನಅಇ 14 ಎಸ್‌ಎಫ್‌ಸಿ 2025, ದಿನಾಂಕ:03-02-2025 & 28-04-2025ಗಳಲ್ಲಿ ಮೊತ್ತ ರೂ.127.50 ಕೋಟಿಗಳ ಕ್ರಿಯಾಯೋಜನೆ ಅನುಮೋದನೆಯಾಗಿರುತ್ತದೆ.

ಸದರಿ ಯೋಜನೆಯಡಿ ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 30.33KM ರಸ್ತೆ ಅಭಿವೃದ್ಧಿ, ಸುಮಾರು 30.70KM ಚರಂಡಿ ಅಭಿವೃದ್ಧಿ ಸುಮಾರು 7.45 KM ಯು.ಜಿ.ಡಿ ಹಾಗೂ ಪಾಲಿಕೆ ವ್ಯಾಪ್ತಿಯ ವಿವಿದಡೆ CC ಕ್ಯಾಮರಾಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಸದರಿ ಕಾಮಗಾರಿಗಳನ್ನು 4 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ, KPP Portal ಮುಖಾಂತರ ಟೆಂಡರ್ ಆಹ್ವಾನಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾರ್ಯದೇಶವನ್ನು ನೀಡಲಾಗಿದ್ದು ಪ್ರಸ್ತುತ ಕಾಮಗಾರಿಗಳು ಪ್ರಕ್ರಿಯಲ್ಲಿರುತ್ತವೆ.

ಮುಂದುವರೆದು, ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ದಿನ 99 ಆಟೋ ಟಿಪ್ಪರ್, 08 ಕಾಂಪ್ಯಾಕ್ಟರ್, 05 ಜೆಸಿಬಿ, 04 ಹಿಟಾಚಿ, 08 ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳ ಮೂಲಕ ನಿರಂತರವಾಗಿ ಮಾನವ ಸಂಪನ್ಮೂಲ ಮತ್ತು ಯಂತ್ರಗಳ ಬಳಕೆಯ ಮೂಲಕ ಸ್ವಚ್ಛತೆಯನ್ನು

ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕ ದೂರುಗಳಿಗಾಗಿ ಪ್ರತ್ಯೇಕವಾಗಿ ಸಾರ್ವಜನಿಕ ಸಹಾಯವಾಣಿ ಸಂಖ್ಯೆ: 18004257677 ಇಡಲಾಗಿದ್ದು, ದೂರುಗಳಿಗೆ ತ್ವರಿತ ಬಗೆಹರಿಸಲು ಕೂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪಟ್ಟಣದಲ್ಲಿ ಯಾಂತ್ರಿಕೃತವಾಗಿ ಒಳಚರಂಡಿ ಜಾಲವನ್ನು ನಿರ್ವಹಣೆ ಮಾಡಲು Emergency Response Sanitation Unit (ERSU) ವನ್ನು ಆರಂಭ ಮಾಡಲಾಗಿದ್ದು, ಕೇಂದ್ರೀಕೃತ 24x7 ದೂರವಾಣಿ ಸೇವೆಯ ಮೂಲಕ ಯಾಂತ್ರಿಕೃತವಾಗಿ ಮಾನವರಹಿತ ಯಂತ್ರಗಳ ಮೂಲಕ ಒಳಚರಂಡಿ ಜಾಲಗಳನ್ನು ನಿರ್ವಹಿಸಲು ಕೂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಸ್ವಚ್ಛತೆ, ಕಸ ವಿಲೇವಾರಿಯನ್ನು ನಿರಂತರವಾಗಿ ಅನುಸರಣ ಕ್ರಮವಿಡಲಾಗುತ್ತಿದ್ದು, ಆದಾಗ್ಯೂ ಸಾರ್ವಜನಿಕರ ನಿರ್ದಿಷ್ಟ ದೂರು ಬಂದಲ್ಲಿ ಬಗೆಹರಿಸುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಮೃತ್ 2.0 ಯೋಜನೆಯಡಿ ರೂ.5.00 ಕೋಟಿ ವೆಚ್ಚದಲ್ಲಿ 03 ಪಾರ್ಕ್ ಅಭಿವೃದ್ಧಿ ಕಾಮಗಾರಿ ಆರಂಭಗೊಂಡಿರುತ್ತದೆ ಹಾಗೂ ರೂ.20.50 ಕೋಟಿ ವೆಚ್ಚದಲ್ಲಿ 04 ಕೆರೆ ಅಭಿವೃದ್ಧಿ ಕಾಮಗಾರಿ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುತ್ತದೆ. ಸಂದರ್ಭಾನುಸಾರ ಪಾಲಿಕೆ ವ್ಯಾಪ್ತಿಯಲ್ಲಿ ಒದಗಬಹುದಾದ ತುರ್ತು ಜರೂರು ಕಾಮಗಾರಿಗಳನ್ನು ಪಾಲಿಕೆ ನಿಧಿಯಲ್ಲೂ ಕೂಡ ತೆಗೆದುಕೊಂಡು ಕಾಮಗಾರಿ ನಿರ್ವಹಿಸಲು ಆದ್ಯತೆ ಕೊಡಲಾಗುತ್ತಿದೆ.

ಸರ್ಕಾರವು ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಎಫ್.ಸಿ ಮುಕ್ತನಿಧಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ, ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಡಿ ಅನುದಾನ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ.

- **ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ** ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ಮತ್ತು ಚರಂಡಿಗಳ ನಿರ್ಮಾಣ, ಶೌಚಾಲಯಗಳ ನಿರ್ಮಾಣ, ಸಣ್ಣ ಮಾರುಕಟ್ಟೆಗಳ ನಿರ್ಮಾಣ, ಸ್ಮಶಾನಗಳ ಅಭಿವೃದ್ಧಿ, ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ಸದರಿ ಅನುದಾನದಡಿ ಹಂಚಿಕೆಯಾಗಿ ಬಿಡುಗಡೆಯಾಗಿರುವ ಅನುದಾನ ವಿವರ ಈ ಕೆಳಕಂಡಂತಿವೆ:

| ವರ್ಷ | ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) | ಕಾಮಗಾರಿಗಳ ಸಂಖ್ಯೆ | | | |
|---|---|---|---|---|---|---|---|
| | | | | ಅನುಮೋದಿತ | ಪೂರ್ಣ | ಪ್ರಗತಿಯಲ್ಲಿ ರುವುದು | ಟೆಂಡರ್ ಹಂತ |
| 2023-24 | 638.00 | 546.20 | 545.63 | 15 | 15 | 0 | 0 |
| 2024-25 | 558.00 | 459.00 | 449.79 | 15 | 15 | 0 | 0 |
| 2025-26 | 241.00 | 237.20 | 233.50 | 13 | 13 | 0 | 0 |
| 2026-27 | 95.00 | 18.00 | 0.00 | 20 | 0 | 0 | 20 |
| **ಒಟ್ಟು** | **1532.00** | **1260.40** | **1228.91** | **63** | **43** | **0** | **20** |

- **ಎಸ್.ಎಫ್.ಸಿ ಕುಡಿಯುವ ನೀರು ಅನುದಾನ:** ಸದರಿ ಅನುದಾನವನ್ನು ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕಾಮಗಾರಿಗಳಾದ ಕೈಗೊಳ್ಳಬಹುದಾಗಿದೆ ಕೊಳವೆ ಬಾವಿಗಳನ್ನು ಆಳಗೊಳಿಸುವುದು, ಸ್ವಚ್ಛಗೊಳಿಸುವುದು, hydrofracturing, ನೀರು ಸರಬರಾಜು ಪೈಪುಗಳ ದುರಸ್ತಿ / ಬದಲಾವಣೆ ಕಾಮಗಾರಿಗಳು, ಅವಶ್ಯಕತೆ ಇದ್ದಲ್ಲಿ ಹೊಸ ಕೊಳವೆ ಬಾವಿಗಳ ಕೊರೆಯಲು ಹಾಗೂ ಪಂಪ್ ಮೋಟಾರ್ ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.

| ವರ್ಷ | ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) | ಕಾಮಗಾರಿಗಳ ಸಂಖ್ಯೆ | | | |
|---|---|---|---|---|---|---|---|
| | | | | ಅನುಮೋದಿತ | ಪೂರ್ಣ | ಪ್ರಗತಿಯಲ್ಲಿ ರುವುದು | ಟೆಂಡರ್ ಹಂತ |
| 2023-24 | 9.04 | 9.04 | 9.04 | 3 | 3 | 0 | 0 |
| 2024-25 | 10.00 | 10.00 | 10.00 | 1 | 1 | 0 | 0 |
| 2025-26 | 10.00 | 10.00 | 10.00 | 1 | 1 | 0 | 0 |
| 2026-27 | 10.00 | 2.50 | 0.00 | 3 | 0 | 0 | 3 |
| **ಒಟ್ಟು** | **39.04** | **31.54** | **29.04** | **8** | **5** | **0** | **3** |

- **ಎಸ್.ಎಫ್.ಸಿ ವಿಶೇಷ ಅನುದಾನವನ್ನು** ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಯಂತೆ ಮಂಜೂರು ಮಾಡಲಾಗುತ್ತದೆ. ವಿಶೇಷ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತದೆ.

| ವರ್ಷ | ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) | ಕಾಮಗಾರಿಗಳ ಸಂಖ್ಯೆ | | |
|---|---|---|---|---|---|---|
| | | | | ಅನುಮೋದಿತ | ಪೂರ್ಣ | ಪ್ರಗತಿಯಲ್ಲಿ |
| 2019-20 | 1800.00 | 1543.53 | 1541.69 | 66 | 66 | 0 |
| 2022-23 | 2000.00 | 972.11 | 977.80 | 58 | 56 | 2 |
| **ಒಟ್ಟು** | **3800.00** | **2515.64** | **2519.50** | **124** | **122** | **2** |

- **ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ** ಕುಡಿಯುವ ನೀರು, ಒಳಚರಂಡಿ ಕಾಮಗಾರಿಗಳು, ರಸ್ತೆ ಅಭಿವೃದ್ಧಿ ಕಾಮಗಾರಿಗಳು, ಚರಂಡಿ ಕಾಮಗಾರಿಗಳಿಗೆ 2025-26ನೇ ಸಾಲಿನಲ್ಲಿ 79 ಕಾಮಗಾರಿಗಳಿಗೆ ಒಟ್ಟು ರೂ.2325.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಅದರ ಪೈಕಿ ರೂ.1678.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದಿಂದ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸೂಚಿಸಲಾಗಿದೆ.

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ವಿವಿಧ ಯೋಜನೆಗಳಡಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದಿಂದ ಪಾಲಿಕೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಸಂಖ್ಯೆ:ನಅಇ 225 ಎಸ್‌ಎಫ್‌ಸಿ 2026

**(ಡಾ: ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು